(ದಿನಾಂಕಃ 05.09.2017 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಸಿಸಿಕೆವಿ ವಕೀಲರಿಂದಃ

ಪ್ರತಿವಾದಿಯು ಬರೆದುಕೊಟ್ಟ ಕ್ರಯದ ಕರಾರು ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿಶಾನೆ.ಪಿ.1 ಎಂದು, ನಿಶಾನೆ.ಪಿ.1ರಲ್ಲಿ ಪ್ರತಿಯೊಂದು ಪುಟದಲ್ಲೂ ನಾನು ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.1(ಎ) ಎಂದು ಗುರುತಿಸಲಾಯಿತು. ಪ್ರತಿವಾದಿಗಳು ನಿಶಾನೆ.ಪಿ.1ರಲ್ಲಿ ಪ್ರತಿಯೊಂದು ಪುಟದಲ್ಲೂ ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಅವರ ಸಹಿಗಳನ್ನು ನಾನು ಗುರುತಿಸಿದ್ದು ಕೊನೆಯ ಪುಟದಲ್ಲಿರುವ ಅವರ ಸಹಿಗಳನ್ನು ನಿಶಾನೆ.ಪಿ.1(ಬಿ) ಯಿಂದ ನಿಶಾನೆ.ಪಿ.1(ಡಿ) ಎಂದು ಗುರುತಿಸಲಾಯಿತು. ನಿಶಾನೆ.ಪಿ.1ಕ್ಕೆ ಸಾಕ್ಷಿಗಳು ಸಹಿ ಮಾಡಿರುತ್ತಾರೆ. ಪ್ರತಿವಾದಿಗಳಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದು ಕಚೇರಿ ನಕಲನ್ನು ನಿಶಾನೆ.ಪಿ.2 ಎಂದು, ಮೂರು ಅಂಚೆ ರಶೀದಿಗಳನ್ನು ಒಟ್ಟಾಗಿ ನಿಶಾನೆ.ಪಿ.3 ಎಂದು, ಎರಡು ಸ್ವೀಕೃತಿ ಪತ್ರಗಳನ್ನು ನಿಶಾನೆ.ಪಿ.4 ಮತ್ತು ನಿಶಾನೆ.ಪಿ.5 ಎಂದು, ಒಂದು ನೋಟೀಸ್ ಹಿಂತಿರುಗಿ ಬಂದಿದ್ದು ಸದರಿ ನೋಟೀಸ್‌ನ್ನು ನ್ಯಾಯಾಲಯದ ಮುಂದೆ ತೆರೆದು ಅದನ್ನು ನಿಶಾನೆ.ಪಿ.6 ಮತ್ತು ಕವರ್‌ನ್ನು ನಿಶಾನೆ.ಪಿ.6(ಎ) ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆರ್‌ಟಿಸಿಯನ್ನು ಹಾಜರುಮಾಡಿದ್ದು ಅದನ್ನು ನಿಶಾನೆ.ಪಿ.7 ಎಂದು ಗುರುತಿಸಲಾಯಿತು. ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರತಿವಾದಿಗಳು ಏಕಪಕ್ಷವಾದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎಂ ಒ

ಕೆ. ಶ್ರೀವಿದ್ಯಾ
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ರಾಮನಗರ.